ಓ.ಎಸ್.ನಂ.160/2018

ಪಿ.ಡಬ್ಲ್ಯೂ:1

**ದಿನಾಂಕ:21.10.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿಗಳ ಪರ ಶ್ರೀ.ಕೆ.ಎನ್.ಆರ್. ವಕೀಲರಿಂದಃ**

ಪಾರ್ವತಮ್ಮ ನನ್ನ ತಾಯಿ, ಪುಟ್ಟಪ್ಪ ಅಂದರೆ ನನ್ನ ತಾಯಿಯ ತಂದೆಯಾಗಿರುತ್ತಾರೆ. ನನ್ನ ತಂದೆಯ ಹೆಸರು ಬಸಪ್ಪ. ಸರ್ವೆ:ನಂ.34 ರಲ್ಲಿ ಒಟ್ಟು 1 ಎಕರೆ 17 ಗುಂಟೆ ವಿಸ್ತೀರ್ಣದ ಜಮೀನು ಇರುತ್ತದೆ.

ಆ ಪೈಕಿ ಪ್ರತಿವಾದಿಗಳ ತಂದೆ ಮಹದೇವಪ್ಪ ರವರಿಗೆ ದಕ್ಷಿಣ ಭಾಗದ ಇಪ್ಪತ್ತೆಂಟುವರೆ (28 1/2) ಗುಂಟೆ ಜಮೀನನ್ನು ಮಾರಾಟ ಮಾಡಿರುತ್ತೇನೆ ಅಂದರೆ ಸರಿ. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ, ಸದರಿ ಛಾಯಾಚಿತ್ರದಲ್ಲಿ ಕಾಣುವ ತಂತಿಬೇಲಿ ನಿಮ್ಮ ಜಮೀನಿನ ಪೂರ್ವಕ್ಕೆ ಇರುವ ಬೇಲಿ ಎಂದು ಒಪ್ಪಿಕೊಂಡಿದ್ದು, ಅದನ್ನು ನಿಡಿ-1 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ, ಸದರಿ ಛಾಯಾಚಿತ್ರದಲ್ಲಿ ಕಾಣುವ ಡಾಂಬರು ರಸ್ತೆ ನಿಮ್ಮ ತೋಟದ ಉತ್ತರ ದಿಕ್ಕಿನಲ್ಲಿರುವ ಹಾದುಹೋಗಿರುವ ರಸ್ತೆ ಎಂದು ಕೇಳಲಾಗಿ, ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ಛಾಯಾಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಛಾಯಾಚಿತ್ರವನ್ನು ತೋರಿಸಿ, ಸದರಿ ಛಾಯಾಚಿತ್ರದಲ್ಲಿ ಕಾಣುವ ಅಡಿಕೆ ಮರಗಳು ಸುಮಾರು 23 ವರ್ಷಗಳ ಪ್ರಾಯದ ಮರಗಳು ಅಂದರೆ, ಸಾಕ್ಷಿ ಹೌದು ಎಂದು ಒಪ್ಪಿಕೊಂಡಿದ್ದು, ಅದನ್ನು ನಿಡಿ-3 ಎಂದು ಗುರುತಿಸಲಾಯಿತು.

ಪ್ರತಿವಾದಿಗಳ ತಂದೆ 1996-97 ರಲ್ಲಿ ನನ್ನಿಂದ ಕ್ರಯ ಮಾಡಿದ ಜಮೀನಿನಲ್ಲಿ ಅಡಿಕೆ ಸಸಿಗಳನ್ನು ನಾಟಿ ಮಾಡಿಕೊಂಡಿರುತ್ತಾರೆ ಅಂದರೆ ಸರಿ. ನಾನು ಮತ್ತು ಪ್ರತಿವಾದಿಗಳ ತಂದೆ 1966-97 ರಲ್ಲಿ ಅಡಿಕೆ ಸಸಿಗಳನ್ನು ನಾಟಿ ಮಾಡಿರುತ್ತೇವೆ ಅಂದರೆ ಸರಿ. ನನ್ನ ತೋಟದ ಪಶ್ಚಿಮ ದಿಕ್ಕಿಗೆ ಕೆರೆಯಿಂದ ಹಾದುಬಂದಿರುವ ಸಣ್ಣ ನೀರುಗಾಲುವೆ ಇದೆ ಅಂದರೆ ಸರಿ. ಸಾಕ್ಷಿಗೆ ಅಕಾರ್ ಬಂದ್ ನ ಸರ್ವೆ ಸ್ಕೆಚ್ ನ ದಾಖಲೆಯನ್ನು ತೋರಿಸಿ, ಸದರಿ ಆಕಾರ್ ಬಂದ್ ನ ಪ್ರಕಾರ ನಿಮ್ಮ ಜಮೀನಿನಲ್ಲಿ ನಾಲೆ ಮತ್ತು ರಸ್ತೆ ಇದೆ ಎಂದು ತೋರಿಸಲಾಗಿದೆ ಅಂದರೆ, ಸಾಕ್ಷಿ ನೋಡಿ ಹೌದು ಎಂದು ಒಪ್ಪಿಕೊಂಡಿದ್ದು, ಸದರಿ ದಾಖಲೆಯನ್ನು ನಿಡಿ-4 ಎಂದು ಗುರುತಿಸಲಾಯಿತು. ನಮ್ಮ ಜಮೀನಿನಲ್ಲಿ ನಾಟಿ ಮಾಡಿರುವ ಅಡಿಕೆ ಮರಗಳ ನಡುವೆ 8 ರಿಂದ 9 ಅಡಿಗಳ ಅಂತರ ಇರುತ್ತದೆ. ಅದೇ ರೀತಿ ಪ್ರತಿವಾದಿಗಳ ಜಮೀನಿನಲ್ಲಿಯೂ ಸಹ ನಾಟಿ ಮಾಡಿರುವ ಅಡಿಕೆ ಮರಗಳ ನಡುವೆ 8 ರಿಂದ 9 ಅಡಿಗಳ ಅಂತರ ಇರುತ್ತದೆ ಅಂದರೆ ಸರಿ. ನಮ್ಮ ಜಮೀನಿನಲ್ಲಿ ಅಡಿಕೆ ಮರದ 14 ಸಾಲುಗಳು ಇದ್ದು, ಪ್ರತಿವಾದಿಗಳ ಜಮೀನಿನಲ್ಲಿಯೂ ಸಹ ಅಡಿಕೆ ಮರದ 14 ಸಾಲುಗಳು ಇರುತ್ತದೆ ಅಂದರೆ, ಸಾಕ್ಷಿಯು ನಾನು ಲೆಕ್ಕ ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ಜಮೀನಿನಲ್ಲಿ 14 ಸಾಲುಗಳು ಅಡಿಕೆ ಮರಗಳಲ್ಲದೇ ಇನ್ನೆರಡು

**ಪಿ.ಡಬ್ಲ್ಯು:1**

ಅರ್ಧ ಅಡಿಕೆ ಸಾಲುಗಳಿವೆ ಅಂದರೆ, ಸಾಕ್ಷಿಯು ನಾನು ಸಾಲುಗಳನ್ನು ಎಣಿಸಿಲ್ಲ, ಆದರೆ ಎರಡು ಅರ್ಧ ಸಾಲುಗಳಿವೆ ಎಂದು ನುಡಿಯುತ್ತಾರೆ.

ನಮ್ಮ ಜಮೀನನ್ನು ಅಳತೆ ಮಾಡುವ ಸಮಯದಲ್ಲಿ ಅಕ್ಕ-ಪಕ್ಕದ ಜಮೀನಿನವರಿಗೆ ನೋಟೀಸನ್ನು ನೀಡಲಾಗಿರುತ್ತದೆ, ಆ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ದಿಃ16.05.2016 ರಂದು ಹಣದ ಅವಶ್ಯಕತೆಗೋಸ್ಕರ ದಾವಾ ಎ ಶೆಡ್ಯೂಲ್ ಆಸ್ತಿಯನ್ನು ಎಂ.ವಿಜಯ್ ಕುಮಾರ್ ಎಂಬುವವರಿಗೆ ಹಣದ ಬಾಬ್ತು ಭದ್ರತೆಗಾಗಿ ಕ್ರಯಪತ್ರ ಮಾಡಿಕೊಟ್ಟಿರುತ್ತೇನೆ ಮತ್ತು ಸ್ವಾಧೀನವನ್ನು ಆತನಿಗೆ ಬಿಟ್ಟುಕೊಟ್ಟಿರುವುದಿಲ್ಲ ಅಂದರೆ ಸರಿ, ನಂತರದಲ್ಲಿ ಸದರಿ ವಿಜಯಕುಮಾರ್ ಅವರಿಂದ ದಾವಾ ಎ ಶೆಡ್ಯೂಲ್ ಆಸ್ತಿಗೆ ಸಂಬಂಧಿಸಿದಂತೆ ನನ್ನ ಹೆಸರಿಗೆ ಕ್ರಯಪತ್ರ ಮಾಡಿಸಿಕೊಂಡಿರುತ್ತೇನೆ ಅಂದರೆ ಸರಿ.ಪ್ರತಿವಾದಿಗಳು ನನಗೆ ಸೇರಿದ ಯಾವುದೇ ಆಸ್ತಿಯನ್ನು ಒತ್ತುವರಿ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಜಮೀನಿನಲ್ಲಿ ಹಾದುಹೋಗಿರುವ ರಸ್ತೆಯ ಬಾಬ್ತು ಹಾಗೂ ನೀರುಗಾಲುವೆ ಬಾಬ್ತು 8 ಗುಂಟೆ ಖರಾಬು ಜಮೀನು ಸೇರಿ ನಾನು ಒಟ್ಟು ಮೂವತ್ತಾರುವರೆ ಗುಂಟೆ (36 ½) ಜಮೀನಿನಲ್ಲಿ ಸ್ವಾಧೀನದಲ್ಲಿದ್ದೇನೆ ಅಂದರೆ ಸರಿ. ನನ್ನ ಹಾಗೂ ಪ್ರತಿವಾದಿಗಳ ಜಮೀನಿನ ನಡುವೆ ಬದು ಇದ್ದರೂ ಸಹ ಯಾವುದೇ ಬದು ಇಲ್ಲ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ನಾನು ನನ್ನ ಜಮೀನನ್ನು ಅಳತೆ ಮಾಡಿಸಿರುವುದರ ಬಗ್ಗೆ ನನ್ನ ಆಜುಬಾಜುದಾರರಿಗೆ ಮತ್ತು ಪ್ರತಿವಾದಿಗಳಿಗೆ ತಿಳಿದಿರುವುದಿಲ್ಲ ಅಂದರೆ ಸರಿಯಲ್ಲ. ನನ್ನ ಜಮೀನು ಒತ್ತುವರಿಯಾಗದಿದ್ದರೂ ಸಹ ಸುಳ್ಳು ದಾವೆ ದಾಖಲು ಮಾಡಿದ್ದೇನೆ ಅಂದರೆ ಸರಿಯಲ್ಲ.

ನಮ್ಮ ಜಮೀನಿಗೆ ಮತ್ತು ಪ್ರತಿವಾದಿಗಳ ಜಮೀನಿಗೆ ಅಡಿಕೆ ಸಸಿ ನಾಟಿ ಮಾಡುವ ಪೂರ್ವದಲ್ಲಿ ತೆಂಗಿನ ಮರಗಳು ಇದ್ದವು ಅಂದರೆ ಸರಿ. ಈಗಲೂ ಸಹ ನಮ್ಮ ಮತ್ತು ಪ್ರತಿವಾದಿಗಳ ಜಮೀನಿನಲ್ಲಿ ಕೆಲವು ತೆಂಗಿನ ಮರಗಳು ಇವೆ ಹಾಗೂ ಕೆಲವು ತೆಂಗಿನಮರಗಳು ಬಿದ್ದುಹೋಗಿವೆ ಅಂದರೆ ಸರಿ. ಪ್ರತಿವಾದಿಗಳ ತಂದೆ ನನ್ನಿಂದ ಕ್ರಯ ಮಾಡಿದ ಇಪ್ಪತ್ತೆಂಟುವರೆ (28 1/2) ಗುಂಟೆ ಜಮೀನಲ್ಲಿ ಮಾತ್ರ ಪ್ರತಿವಾದಿಗಳು

ಸ್ವಾಧೀನಾನುಭವದಲ್ಲಿದ್ದಾರೆ ಅಂದರೆ ಸರಿಯಲ್ಲ. ವಿನಃ ಕಾರಣ ಪ್ರತಿವಾದಿಗಳಿಗೆ ತೊಂದರೆ ಕೊಡುವ ಸಲುವಾಗಿ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.